ಕರ್ನಾಟಕ ರಾಜ್ಯ ಪೊಲೀಸ್

# ಪ್ರಥಮ ವರ್ತಮಾನ ವರದಿ

(ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ರ ಕಲಂ 173 ರ ಕೆಳಗೆ)

ಘನ ನ್ಯಾಯಾಲಯ : Prl. Civil Judge(Sr.Dn) & CJM Court,Haveri Dist., Haveri

1. ಜಿಲ್ಲೆ : Haveri ವೃತ್ತ/ಉಪ ವಿಭಾಗ : Haveri District ಪೊಲೀಸ್ ಠಾಣೆ : Haveri CEN Crime PS

ಅಪರಾಧ ಸಂಖ್ಯೆ : 0099/2024 ಪ್ರ.ವ.ವ.ದಿನಾಂಕ : 07/11/2024

2. ಕಾಯ್ದೆ ಮತ್ತು ಕಲಂಗಳು : BHARATIYA NYAY SANHITA-2023 (U/s- 353(2)).

3. (a) ಕೃತ್ಯ ನಡೆದ ದಿನ : - ದಿನಾಂಕದಿಂದ : 07/11/2024 ದಿನಾಂಕ ವರೆಗೆ : 07/11/2024

ವೇಳೆಯಿಂದ : 13:00:00 ವೇಳೆಯವರೆಗೆ : 13:01:00

(b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ: 07/11/2024 20:30:00 ಬರವಣಿಗೆಯಲ್ಲಿ/ಹೇಳಿಕೆ : Written

(c) ಫಿರ್ಯಾದುದಾರ/ಬಾತ್ಮೀದಾರ ತಡವಾಗಿ ವರದಿ ಮಾಡಿದ್ದಕ್ಕೆ ಕಾರಣಗಳು: ---

(d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 1 , 20:30:00

4. (a) ಕೃತ್ಯ ನಡೆದ ಸ್ಥಳ : ಬಿಜೆಪಿ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಇವರ ಸೊಶಿಯಲ್ ಮಿಡಿಯಾವಾದ @tejasvi_surya ಎಂಬ 'X' ಖಾತೆಯಲ್ಲಿ ಮತ್ತು ಕನ್ನಡ ದುನಿಯಾ E-Paper ಮತ್ತು Kannada News E-Paper ಗಳಲ್ಲಿ

(b) ಪೊಲೀಸ್ ಠಾಣೆಯಿಂದ ಇರುವ ದಿಕ್ಕು ಮತ್ತು ದೂರ : Towards North side 1 KM.

(c) ಗ್ರಾಮ : ಹಾವೇರಿ ಗಸ್ತಿನ ಹೆಸರು :ಹಾವೇರಿ

(d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು : ಹಾವೇರಿ ಶಹರ ಪೊಲೀಸ್ ಠಾಣೆ

ಜಿಲ್ಲೆ : Haveri

5. ಫಿರ್ಯಾದುದಾರ/ಬಾತ್ಮೀದಾರ :

| | | | |
|---|---|---|---|
| (a) ಹೆಸರು | : ಸುನಿಲ ಹುಚ್ಚಣ್ಣನವರ | ತಂದೆ/ಗಂಡನ ಹೆಸರು | : ದಿಲ್ಲೇಶ್ವರ |
| (b) ವಯಸ್ಸು | : 39 ವರ್ಷ | (c) ವೃತ್ತಿ | : ಸಿಪಿಸಿ-876 ಸೊಶಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್ |
| (d) ಧರ್ಮ | : ಹಿಂದೂ | (e) ಜಾತಿ | : ಕುರುಬರ |
| (f) ಫ್ಯಾಕ್ಸ್ | : | (g) ಇ-ಮೇಲ್ | : |
| (h) ದೂರವಾಣಿ | : 7892398279 | (i) ರಾಷ್ಟ್ರೀಯತೆ | : ಭಾರತೀಯ |
| (j) ಪಾಸಪೋರ್ಟ ಸಂಖ್ಯೆ | : | | ನೀಡಿದ ದಿನಾಂಕ: |
| (k) ವಿಳಾಸ | : ಜಿಲ್ಲಾ ಪೊಲೀಸ್ ಕಛೇರಿ ಹಾವೇರಿ, ವಿಳಾಸ: ಸಾ॥ ಮಂಜುನಾಥ ನಗರ, ಹಾವೇರಿ, ಹಾವೇರಿ | (l) ಲಿಂಗ | : ಮರುಷ |

(m) ಫಿರ್ಯಾದುದಾರರು ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್ದಾರೆ ? : ಹೌದು

6. ಗೊತ್ತಿರುವ/ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

| Sl No. | ಹೆಸರು/ತಂದೆಯ ಹೆಸರು/ ಜಾತಿ /ವಿಳಾಸ | ವಿಧ | ವ್ಯಕ್ತಿಯ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | ಶ್ರೀ ತೇಜಸ್ವಿ ಸೂರ್ಯ, ಬಿಜೆಪಿ ಸಂಸದರು | - | - | - | - | - |
| 2 | ಸಂಪಾದಕರು, ಕನ್ನಡ ದುನಿಯಾ E-Paper | - | - | - | - | - |
| 3 | ಸಂಪಾದಕರು, Kannada News E-Paper | - | - | - | - | - |

7. ನೊಂದವರ ವಿವರಗಳು

| Sl No | ಹೆಸರು | ವಿಳಾಸ | ಗಾಯದ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | - | - | - | - | - | - |

8. ಕಳುವಾಗಿರುವ/ ಭಾಗಿಯಾಗಿರುವ ಸ್ವತ್ತುಗಳ ವಿವರಗಳು

| Sl.No | Property Type | Item description | Estimated Value (in Rs.) |
|---|---|---|---|
| 1 | - | - | - |

ಕಳುವಾಗಿರುವ/ ಭಾಗಿಯಾಗಿರುವ ಸ್ವತ್ತುಗಳ ಮೌಲ್ಯ : -

9. ಪಂಚನಾಮ ವರದಿ/ ಯು.ಡಿ. ಕೇಸ್ ಸಂಖ್ಯೆ:

10. ಪ್ರಥಮ ವರ್ತಮಾನ ವರದಿಯ ವಿವರಗಳು

ಇದರಲ್ಲಿಯ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ಫಿರ್ಯಾದುವಿನಲ್ಲಿ ದಿನಾಂಕ: 07/11/2024 ರಂದು ಮಧ್ಯಾಹ್ನ 1:00 ಗಂಟೆ ಸುಮಾರಿಗೆ ಬಿಜೆಪಿ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಇವರ ಸೋಶಿಯಲ್ ಮಿಡಿಯಾವಾದ @tejasvi_surya ಎಂಬ 'X' ಖಾತೆಯಲ್ಲಿ A farmer in Haveri commits suicide after finding his land is taken over by Waqf!, In their haste to appease minorities, CM @siddaramaiah and minister @BZZameerAhmedK have unleashed catastrophic effects in Karnataka that are becoming impossible to contain with every passing day ಅಂತಾ ಇತ್ಯಾದಿ ಕನ್ನಡ ದುನಿಯಾ E-Paper ನಲ್ಲಿರುವ ಸುಳ್ಳು ಸುದ್ದಿಯನ್ನು ಪೋಸ್ಟ್ ಮಾಡಿದ್ದು, ಇದಲ್ಲದೆ ಕನ್ನಡ ದುನಿಯಾ E-Paper ಮತ್ತು Kannada News E-Paper ನ ಸಂಪಾದಕರು ತಮ್ಮ ತಮ್ಮ E-Paper ಗಳಲ್ಲಿ ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ನಮೂದು: ಹಾವೇರಿಯಲ್ಲಿ ರೈತ ಆತ್ಮಹತ್ಯೆ ಎಂಬ ಶಿರ್ಷಿಕೆ ಅಡಿಯಲ್ಲಿ "ಹಾವೇರಿ: ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ಬಂದಿರುವುದಕ್ಕೆ ಮಾನಸಿಕವಾಗಿ ಮನನೊಂದು ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹಾವೇರಿ ರೈತರು ಆರೋಪಿಸಿದ್ದಾರೆ. ಹಾವೇರಿ ಜಿಲ್ಲೆಯ ಹರನಗಿ ಗ್ರಾಮದ ರೈತ ಚನ್ನಪ್ಪ ಎಂಬುವವರ ಪುತ್ರ ರುದ್ರಪ್ಪ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರೈತರು ಆರೋಪಿಸಿರುತ್ತಾರೆ. 8 ವರ್ಷಗಳ ಹಿಂದೆ 4 ಎಕರೆ ಹೊಲದ ಪಹಣಿಯಲ್ಲಿ ವಕ್ಫ ಹೆಸರು ಬಂದಿರುವುದಕ್ಕೆ ಮನನೊಂದು ರೈತ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಹಾವೇರಿಯ ರೈತರು ಆರೋಪಿಸಿದ್ದಾರೆ. ಸಧ್ಯ ರೈತರು ವಕ್ಫ ನೋಟಿಸ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ" ಎಂಬ ಸುಳ್ಳು ಸುದ್ದಿಯನ್ನು ಪ್ರಸಾರ ಮಾಡಿದ ಅಪರಾಧ.

11. (a) ತೆಗೆದುಕೊಂಡ ಕ್ರಮ: ಪ್ರಕರಣ ದಾಖಲಿಸಿಕೊಂಡು ಕೂಡಲೆ ತನಿಖೆ ಕೈಗೊಂಡಿದೆ.

12. (b) ಪ್ರ. ವ. ವರದಿಯನ್ನು ಫಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕ್ಕಟೆಯಾಗಿ ಕೊಡಲಾಗಿದೆ : ಹೌದು

(c) ಪೊಲೀಸ್ ಅಧಿಕಾರಿಯು ತನಿಖೆಯ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದ್ದಲ್ಲಿ ಕಲಂ 176 ಬಿ.ಎನ್.ಎಸ್.ಎಸ್. ಯಡಿ ಕಾರಣವನ್ನು ದಾಖಲಿಸಬೇಕು: ತನಿಖೆ ಕೈಗೊಂಡಿದೆ.

12. ಫಿರ್ಯಾದಿಯ ಸಹಿ/ಹೆಬ್ಬೆರಳ ಗುರುತು: [signature]

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 07/11/2024 21:00:00

14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿಸಿ/ಹೆಚ್.ಸಿ : N.M Megalamani, CPC 1365

ಓದಿ ಹೇಳಲಾಗಿ ಕೇಳಲಾಗಿ ಸರಿಯಿದೆ

ಠಾಣಾಧಿಕಾರಿಯ ಸಹಿ

[signature]

ಹೆಸರು: S. R. Ganachari, PI

ಪೊಲೀಸ್ ಇನ್ಸಪೆಕ್ಟರ್
ಸೈಬರ್.ಎಕನಾಮಿಕ್ & ನಾರ್ಕೋಟಿಕ್ಸ್
ಕ್ರೈಂ ಪೊಲೀಸ್ ಠಾಣೆ. ಹಾವೇರಿ-581110

ಪ್ರತಿಗಳು : 1) Superintendent of Police/Commissioner of Police, Haveri
2) Addl. Superintendent of Police, Haveri
3) Complainant's Copy
4) Police Station Copy

ಗೆ,

ಮಾನ್ಯ ಪೊಲೀಸ್ ಇನ್ಸಪೆಕ್ಟರ್,
ಸಿ.ಇ.ಎನ್. ಕ್ರೈಂ ಪೊಲೀಸ್ ಠಾಣೆ,
ಹಾವೇರಿ,

ನಾನು ಸುನಿಲ ತಂದೆ ದಿಲ್ಲೇಶ್ವರ ಹುಚ್ಚಣ್ಣನವರ, ವಯಾ: 39 ವರ್ಷ, ಜಾತಿ: ಹಿಂದೂ ಕುರುಬರ, ಉದ್ಯೋಗ: ಸಿಪಿಸಿ-876, ಸೋಶಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್, ಜಿಲ್ಲಾ ಪೊಲೀಸ್ ಕಛೇರಿ ಹಾವೇರಿ, ವಿಳಾಸ: ಸಾ॥ ಮಂಜುನಾಥ ನಗರ, ಹಾವೇರಿ, ಹಾವೇರಿ, ಮೊ.ನಂ. 7892398279 ನೀಡುವ ಗಣಕೀಕೃತ ಫಿರ್ಯಾದು ಏನೆಂದರೆ,

ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ಜಿಲ್ಲಾ ಪೊಲೀಸ್ ಕಛೇರಿ ಹಾವೇರಿಯಲ್ಲಿ ಕಳೆದ 3 ವರ್ಷಗಳಿಂದ ಸೋಶಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್‌ನಲ್ಲಿ ಕೆಲಸ ಮಾಡುತ್ತಿರುತ್ತೇನೆ. ಈ ದಿನ ನಾನು ಕಛೇರಿಯಲ್ಲಿದ್ದು ಸೋಶಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮಧ್ಯಾಹ್ನ 1:00 ಗಂಟೆ ಸುಮಾರಿಗೆ E-Paper ಕನ್ನಡ ದುನಿಯಾ ದಲ್ಲಿ "Breaking: ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ನಮೂದು: ಹಾವೇರಿಯಲ್ಲಿ ರೈತ ಆತ್ಮಹತ್ಯೆ! ಎಂಬ ಶಿರ್ಷಿಕೆ ಅಡಿಯಲ್ಲಿ ಹಾವೇರಿ: ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ನಮೂದಾಗಿದ್ದಕ್ಕೆ ಹಾವೇರಿಯಲ್ಲಿ ಮನನೊಂದು ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಹಾವೇರಿ ಜಿಲ್ಲೆಯ ಹರನಗಿ ಗ್ರಾಮದ ರೈತ ಚನ್ನಪ್ಪ ಎಂಬುವವರ ಪುತ್ರ ರುದ್ರಪ್ಪ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪ ಮಾಡಿದ್ದಾರೆ 4 ಎಕರೆ ಹೊಲದ ಪಹಣಿಯಲ್ಲಿ ವಕ್ಫ ಹೆಸರು ನಮೂದಾಗಿದ್ದಕ್ಕೆ ಅವರು ಆತ್ಮಹತ್ಯೆಗೆ ಶರಣಾಗಿರುವುದು ಬೆಳಕಿಗೆ ಬಂದಿದೆ. ಘಟನೆ ಹಿನ್ನಲೆ ಗ್ರಾಮದ ಜನರು ಆಕ್ರೋಶ ಹೊರ ಹಾಕಿದ್ದಾರೆ" ಅಂತಾ ಮತ್ತು E-Paper Kannada News ನಲ್ಲಿ "Breaking: ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ನಮೂದು: ಹಾವೇರಿಯಲ್ಲಿ ರೈತ ಆತ್ಮಹತ್ಯೆ ಎಂಬ ಶಿರ್ಷಿಕೆ ಅಡಿಯಲ್ಲಿ "ಹಾವೇರಿ: ಜಮೀನಿನ ಪಹಣಿಯಲ್ಲಿ ವಕ್ಫ ಹೆಸರು ಬಂದಿರುವುದಕ್ಕೆ ಮಾನಸಿಕವಾಗಿ ಮನನೊಂದು ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹಾವೇರಿ ರೈತರು ಆರೋಪಿಸಿದ್ದಾರೆ. ಹಾವೇರಿ ಜಿಲ್ಲೆಯ ಹರನಗಿ ಗ್ರಾಮದ ರೈತ ಚನ್ನಪ್ಪ ಎಂಬುವವರ ಪುತ್ರ ರುದ್ರಪ್ಪ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರೈತರು ಆರೋಪಿಸಿರುತ್ತಾರೆ. 8 ವರ್ಷಗಳ ಹಿಂದೆ 4 ಎಕರೆ ಹೊಲದ ಪಹಣಿಯಲ್ಲಿ ವಕ್ಫ ಹೆಸರು ಬಂದಿರುವುದಕ್ಕೆ ಮನನೊಂದು ರೈತ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಹಾವೇರಿಯ ರೈತರು ಆರೋಪಿಸಿದ್ದಾರೆ. ಸಧ್ಯ ರೈತರು ವಕ್ಫ ನೋಟಿಸ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ" ಎಂಬ ಸುದ್ದಿಯನ್ನು ತಮ್ಮ E-Paper ಗಳಲ್ಲಿ ಸಂಪಾದಕರು ಪ್ರಸಾರ ಮಾಡಿರುತ್ತಾರೆ. ನಂತರ ಮೇಲ್ಕಂಡ ಸುದ್ದಿಯನ್ನು ಬಿಜೆಪಿ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಇವರು ಕನ್ನಡ ದುನಿಯಾ E-Paper ನ ಸುದ್ದಿಯನ್ನು ಟ್ಯಾಗ್ ಮಾಡಿ ತಮ್ಮ @tejasvi_surya ಎಂಬ'X' ಖಾತೆಯಲ್ಲಿ A farmer in Haveri commits suicide after finding his land is taken over by Waqf!, In their haste to appease minorities, CM @siddaramaiah and minister @BZZameerAhmedK have unleashed catastrophic effects in Karnataka that are becoming impossible to contain with every passing day ಅಂತಾ ಇತ್ಯಾದಿ ಪೋಸ್ಟ್ ಮಾಡಿರುತ್ತಾರೆ.

ನಂತರ ನಾನು ಮೇಲ್ಕಂಡ ಸುದ್ದಿ ಕನ್ನಡ ದುನಿಯಾ E-Paper ಮತ್ತು Kannada News E-Paper ನಲ್ಲಿ ಬಂದಿರುವ ಮಾಹಿತಿಯನ್ನು ಮಾನ್ಯ ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ ರವರಿಗೆ ತಿಳಿಸಿದಾಗ, ಮಾನ್ಯರು ಮೇಲ್ಕಂಡ ಸದರಿ ಸುದ್ದಿಯ ಬಗ್ಗೆ Fact Check ಮಾಡುವಂತೆ ತಿಳಿಸಿದರು. ನಂತರ ನಾನು ಮತ್ತು ಜಿಲ್ಲಾ ಪೊಲೀಸ್ ಕಛೇರಿಯ ಸಿಸ್ಟಂ ಎಡ್ಮಿನಿಸ್ಟ್ರೇಟರ್ ಪ್ರಕಾಶ ಗಾಯದ ಇವರು ಸೇರಿ Fact Check ಮಾಡಿದಾಗ, ಪ್ರಸ್ತುತದಲ್ಲಿ ಹಾವೇರಿ ಜಿಲ್ಲೆಯಲ್ಲಿ ಈ ರೀತಿ ವಕ್ಫ ವಿಷಯಕ್ಕೆ ಸಂಬಂಧಿಸಿದಂತೆ ರೈತ ಆತ್ಮಹತ್ಯೆ ಪ್ರಕರಣ ನಡೆದಿರುವುದಿಲ್ಲ. ಆದರೆ ಮೇಲ್ಕಂಡ E-Paper ಗಳಲ್ಲಿ ಬಂದಂತ ಸುದ್ದಿ ದಿನಾಂಕ: 06/01/2022 ರಂದು ಆಡೂರ ಪೊಲೀಸ್ ಠಾಣೆಯ ವ್ಯಾಪ್ತಿಯ ಹರನಗಿರಿ ಗ್ರಾಮದ ರೈತ ಸಾಲದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡ ವಿಷಯವಾಗಿದ್ದು, ಈ ಕುರಿತು ಈಗಾಗಲೆ ಆಡೂರ ಪೊಲೀಸ್ ಠಾಣೆ ಯುಡಿಆರ್ ನಂ. 3/2022 ಕಲಂ 174 ಸಿಆರ್‌ಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿ ಅಂತಿಮ ವರದಿಯನ್ನು ತಹಶಿಲ್ದಾರ ಹಾನಗಲ್ ರವರಿಗೆ ಸಲ್ಲಿಸಿದ್ದು, ಸದರಿ ಪ್ರಕರಣ ಮುಕ್ತಾಯವಾಗಿರುತ್ತದೆ. ಇದೇ ಸುದ್ದಿಯನ್ನು ಪ್ರಸ್ತುತ ವಕ್ಫ ವಿಚಾರಕ್ಕೆ ನಡೆದಿದೆ ಅಂತಾ ಬಿಂಬಿಸಿ ಸುಳ್ಳು ಸುದ್ದಿಯನ್ನು

ಪ್ರಸಾರ ಮಾಡಿರುವ ಬಗ್ಗೆ ಮಾನ್ಯ ಪೊಲೀಸ್ ಅಧೀಕ್ಷಕರಿಗೆ ತಿಳಿಸಿದಾಗ, ಮಾನ್ಯರು ಈ ಬಗ್ಗೆ ದೂರು ನೀಡುವಂತೆ ತಿಳಿಸಿದ ಮೇರೆಗೆ ಈ ದಿನ ಠಾಣೆಗೆ ದೂರು ನೀಡಲು ಬಂದಿರುತ್ತೇನೆ.

ಈ ರೀತಿ ಮೇಲ್ಕಂಡ ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ತಮ್ಮ @tejasvi_surya ಎಂಬ 'X' ಖಾತೆಯಲ್ಲಿ ಮೇಲ್ಕಂಡಂತೆ ಸುಳ್ಳು ಸುದ್ದಿಯನ್ನು ಪೋಸ್ಟ್ ಮಾಡಿದ ಬಿಜೆಪಿ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಮತ್ತು ಸುಳ್ಳು ಸುದ್ದಿ ಪ್ರಸಾರ ಮಾಡಿದ ಕನ್ನಡ ದುನಿಯಾ E-Paper ಮತ್ತು Kannada News E-Paper ಸಂಪಾದಕರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ನನ್ನ ಫಿರ್ಯಾದು ಇರುತ್ತದೆ.

ಸ್ಥಳ: ಹಾವೇರಿ
ದಿನಾಂಕ: 07/11/2024.

ತಮ್ಮ ವಿಶ್ವಾಸಿ

(S.D. ಹಾಲಪ್ಪನವರ
222-276)

ಈ ದಿನ ದಿನಾಂಕ:-07/11/2024 ರಂದು 20:30 ಗಂಟೆಗೆ ಇತರೆಯವರಂತೆ ಫಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ಫಿರ್ಯಾದನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 99/2024 ಕಲಂ: 353(2) BNS 2023 ನೇದ್ದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದೆ.

ಪೊಲೀಸ್ ಇನ್ಸ್‌ಪೆಕ್ಟರ್
ಸೈಬರ್.ಎಕನಾಮಿಕ್ & ನಾರ್ಕೋಟಿಕ್
ಕ್ರೈಂ ಪೊಲೀಸ್ ಠಾಣೆ, ಹಾವೇರಿ-581110